**DW-1:** ಶ್ರೀನಿವಾಸರೆಡ್ಡಿ

ದಿನಾಂಕಃ **18.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

1. ವಾದಿಯರು ನನ್ನ ಸಹೋದರಿಯರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಅಣ್ಣ ಎಂದರೆ ಸರಿ. ಪದ್ಮಾವತಿ ಮತ್ತು ಬಾಲಾಜಿ ರವರು ನನ್ನ ಅಕ್ಕ ಸುವರ್ಣಮ್ಮ ರವರ ಮಕ್ಕಳು ಎಂದರೆ ಸರಿ. ನನ್ನ ತಂದೆ ಹನುಮಂತರೆಡ್ಡಿ ಮತ್ತು ನಾರಾಯಣರೆಡ್ಡಿ ಸಹೋದರರು ಎಂದರೆ ಸರಿ. 1972-73 ರಲ್ಲಿ ನನ್ನ ತಂದೆ ಹನುಮಂತರೆಡ್ಡಿ ಮತ್ತು ಅವರ ಸಹೋದರ ನಾರಾಯಣರೆಡ್ಡಿ ರವರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಅದರಂತೆ ಅವರವರ ಭಾಗದ ಸ್ವತ್ತುಗಳಲ್ಲಿ ಅವರು ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. ಆದರೆ ದಾವೆಗಳು ಇದ್ದವು ಎಂದು ಉತ್ತರಿಸುತ್ತಾರೆ. ದಾವೆಗಳು ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಗೋವಿಂದಪ್ಪ ರವರಿಗೆ ಇಬ್ಬರೂ ಮಕ್ಕಳು ಎಂದು ಬರೆಸಿದ್ದೇನೆ. ಆದರೆ 6 ಜನ ಇರುತ್ತಾರೆ. ಆ ವಿಚಾರ ನನ್ನ ಪ್ರಮಾಣಪತ್ರದಲ್ಲಿ ಬರೆದಿಲ್ಲ.

2. ನಾನು 1971 ರಲ್ಲಿ ಜನಿಸಿರುತ್ತೇನೆ. ದಿನಾಂಕಃ 24.07.1967 ರಲ್ಲಿ ಹನುಮಂತರೆಡ್ಡಿ ರವರು ಸ್ವತ್ತನ್ನು ಖರೀದಿಸಿದ ಸಮಯದಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಸದರಿ ಆಸ್ತಿಗಳು ಸ.ನಂ.40/3 ಮತ್ತು 41/1 ಆಗಿರುತ್ತದೆ ಎಂದರೆ ಸರಿ. ದಿನಾಂಕಃ 18.04.1973 ರಂದು ಸ್ವತ್ತನ್ನು ಖರೀದಿಸಿದಾಗ ನನಗೆ 2 ವರ್ಷ ಇತ್ತು ಎಂದರೆ ಸರಿ. ಉಳಿಚಿಕೆ ಎಲ್ಲಾ ಆಸ್ತಿಗಳು ಸಹ ನನ್ನ ತಂದೆಯ ಕುಟುಂಬ ಆಸ್ತಿಗಳು ಆಗಿದ್ದವು ಎಂದರೆ ಸರಿ. ಆ ಸ್ವತ್ತುಗಳನ್ನು ಯಾವ ರೀತಿ ಖರೀದಿಸಿದ್ದೇನೆ ಎಂಬ ವಿಚಾರವನ್ನು ನನ್ನ ತಂದೆ ಹೇಳಿದ್ದರು. ನನ್ನ

ತಂದೆ ಸಿವಿಲ್ ಕಂಟ್ರಾಕ್ಟರ್ ಆಗಿದ್ದು ಆ ಹಣದಿಂದ ಖರೀದಿಸಿರುವುದಾಗಿ ಹೇಳಿರುತ್ತಾರೆ. ಕ್ರಯಪತ್ರದಲ್ಲಿ ನನ್ನ ತಂದೆ ಸಿವಿಲ್ ಕಂಟ್ರಾಕ್ಟರ್ ಆಗಿದ್ದು ಅದರಿಂದ ಖರೀದಿಸಿರುವ ಬಗ್ಗೆ ಬರೆದಿಲ್ಲ. ನಾನು ತಂದೆ ಸಿವಿಲ್ ಕಂಟ್ರಾಕ್ಟರ್ ಆಗಿರಲಿಲ್ಲ ಮತ್ತು ಅವರು ಕೇವಲ ರೈತರಾಗಿದ್ದು ವ್ಯವಸಾಯದಿಂದ ಬಂದ ಆದಾಯದಿಂದ ಸ್ವತ್ತು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. 1972 ರಲ್ಲಿ ನನ್ನ ತಂದೆ ಸಿವಿಲ್ ಕಂಟ್ರಾಕ್ಟರ್ ಆಗಿರಲಿಲ್ಲ ಮತ್ತು ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನಾರಾಯಣರೆಡ್ಡಿ ರವರು 5-6 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಾರಾಯಣರೆಡ್ಡಿ ರವರು ಜೀವಂತ ಇದ್ದಾಗ ನನ್ನ ತಂದೆಯ ವಿರುದ್ಧ ಸ್ವತ್ತುಗಳ ವಿಭಾಗ ದಾವೆ ಸಲ್ಲಿಸಿದ್ದರು. ಸದರಿ ವಿಚಾರ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ಇಂದ್ರಮ್ಮ ರವರು ಸಲ್ಲಿಸಿರುವ ದಾವಾ ಸ್ವತ್ತುಗಳು ಹನುಮಂತರೆಡ್ಡಿ ರವರ ಹೆಸರಿನಲ್ಲಿ ಇತ್ತು ಎಂದರೆ 3 ಸ್ವತ್ತುಗಳು ನನ್ನ ಹೆಸರಿನಲ್ಲಿ ಇದ್ದು ಉಳಿಕೆ ಸ್ವತ್ತುಗಳು ಇದ್ದವು ಎಂದು ಉತ್ತರಿಸುತ್ತಾರೆ. ನನಗೆ ದಾನ ನೀಡಿರುವಂತಹ ಸ್ವತ್ತುಗಳು ಸಹ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ಅವುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು. ನಾನು ಮೂಲದಾನಪತ್ರವನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ನಿಡಿ.4 ರ ದಾಖಲೆ ದೃಢೀಕೃತ ದಾಖಲಾಗಿರುತ್ತದೆ.

4. ಮೂಲಪತ್ರವನ್ನು ಬ್ಯಾಂಕ್ ಆಫ್ ಬರೋಡಾ ವೆಂಕಟಾಪುರದಲ್ಲಿ ಇಟ್ಟಿದ್ದೇನೆ. ಬ್ಯಾಂಕ್ ಆಫ್ ಬರೋಡಾ ದವರು ನನ್ನ ವಿರುದ್ಧ 2 ದಾವೆಗಳನ್ನು ಹೂಡಿದ್ದಾರೆ ಎಂದರೆ ಸರಿ. ನನ್ನ ಜಮೀನಲ್ಲಿರುವ ಸ್ವತ್ತುಗಳು ಮತ್ತು ವಾಟರ್ ಪ್ಲಾಂಟ್ ಗೆ ಸಂಬಂಧಿಸಿದಂತೆ ಇಟ್ಟಿದ್ದೇನೆ. ನಮ್ಮ ತಂದೆಯವರು ಕುಟುಂಬದ ಆಸ್ತಿಗಳನ್ನು ಆಧಾರ ಮಾಡಿದ್ದಾರೆ. 2013 ರಿಂದ 2015 ನೇ ಸಾಲಿನಲ್ಲಿ ನನ್ನ ತಂದೆ ಸಾಲ ಮಾಡಿರುತ್ತಾರೆ. ಆ ಸಂದರ್ಭ ವಾದಿಗಳು ಮತ್ತು ಪ್ರತಿವಾದಿ ಮತ್ತು ನಮ್ಮ ತಂದೆ ಒಟ್ಟು ಕುಟುಂಬದಲ್ಲಿ ಇದ್ದೇವು ಎಂದರೆ ಸರಿ. ಹೆಣ್ಣುಮಕ್ಕಳಿಗೆ ವಿವಾಹ

ಮಾಡಿಕೊಟ್ಟಿದ್ದೆವು. ಆ ಕಾಲಕ್ಕೆ ಸ್ವತ್ತುಗಳು ವಿಭಾಗ ಆಗಿತ್ತಾ ಎಂದರೆ ಗೊತ್ತಿಲ್ಲ. ಸಾಕ್ಷಿ ವಿಚಾರಣೆಯಾದ ನಂತರ ನಾನೇ ಅಕಲಮ್ಮ ಎಂಬುವವರಿಗೆ ಉತ್ತೇಜನ ನೀಡಿ ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಕಲಮ್ಮ ರವರ ಹೆಸರಿನಲ್ಲಿ ದಾವಾ ಸ್ವತ್ತುಗಳ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಅಕಲಮ್ಮ ರವರು ಎಂದೂ ಸಹ ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿ. ಹನುಮಂತರೆಡ್ಡಿ ಮತ್ತು ನಾರಾಯಣರೆಡ್ಡಿ ರವರು ಜೀವಂತ ಇದ್ದಾಗ ಅಕಲಮ್ಮ ರವರು ಭಾಗಾಂಶ ಕೋರಿ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ನನಗೆ ಬರೆದುಕೊಟ್ಟಿರುವ ದಾನಪತ್ರಕ್ಕೆ ವಾದಿಯರಾಗಲೀ, ಪ್ರತಿವಾದಿ 1 ರವರಾಗಲೀ ಸಾಕ್ಷಿ ಸಹಿ ಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು ದಾವೆ ಸಲ್ಲಿಸುವವರೆಗೂ ಯಾರು ಸಹ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ:** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.